ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

**S.C. No. 10/2025**

| ಸಾಕ್ಷಿಯ ಹೆಸರು | ಶ್ರೀ ಅಶ್ವಥ್ | ಚಾಸಾಃ | ಪ್ರಾಸಾಃ |
|---|---|---|---|
| ತಂದೆಯ ಹೆಸರು | ಮರಿಯಪ್ಪ | 3 | 2 |
| ವಯಸ್ಸು | 50 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **16.03.2026.** | |
| ಉದ್ಯೋಗ | ವ್ಯವಸಾಯ | | |
| ವಾಸ ಸ್ಥಳ | ಮುಗಬಾಳ | | |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ಪಿರ್ಯಾದಿ ಕೃಷ್ಣಪ್ಪ ನನ್ನ ಮಾವ. ಅವರು ಈಗ ಬದುಕಿಲ್ಲ. ಚಾ ಸಾ 2, 4 ಮತ್ತು 5 ಗೊತ್ತು. ಎಲ್ಲರೂ ಸಂಬಂಧಿಕರು. ಆರೋಪಿತರು ಗೊತ್ತು. ದಿನಾಂಕ 09.02.2023 ರಲ್ಲಿ ಬೆಳಗ್ಗೆ 10.00 ಗಂಟೆಗೆ ಜಿ.ಎಂ.ಕೃಷ್ಣಪ್ಪನವರ ನಿವೇಶನದ ಬಳಿ ಕಂಬ ಊಳಲು ಆರೋಪಿತರು ಹೋಗಿದ್ದರು. ನಾನು, ಮುನಿರಾಜು, ಕೃಷ್ಣಪ್ಪ ಮತ್ತು ಅರುಣ್ ಹೋಗಿದ್ದೆವು. ನಾವೆಲ್ಲರೂ ಸೇರಿ ಆ ಜಮೀನಿನಲ್ಲಿ ಉಳುಮೆ ಮಾಡಲು ಬರಬೇಡಿ ಎಂದು ಹೇಳಿದ್ದರಿಂದ ಗಲಾಟೆಯಾಯಿತು. ಕೇಳಲು ಹೋದಾಗ ಆರೋಪಿತರು ದೊಣ್ಣೆಯಿಂದ ನನ್ನ ಬೆನ್ನಿನ ಬಲಭಾಗಕ್ಕೆ ಹೊಡೆದರು. ಆ ಜಾಗದಲ್ಲಿ ಊತದ ಗಾಯವಾಗಿತ್ತು. ನನ್ನ ಎಡಮೊಣಕೈಗೆ ತರಚಿದ ಗಾಯವಾಗಿತ್ತು. ಅರುಣ್ ಮತ್ತು ಮುನಿರಾಜು ರವರಿಗೆ ರಾಡ್ ನಿಂದ ತಲೆಗೆ ಆರೋಪಿತರು ಹೊಡೆದರು. ಶ್ರೀನಿವಾಸ್ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ನ್ಯಾಯಾಲಯದ ಮುಂದೆ ತೋರಿಸಿದ ದೊಣ್ಣೆ ಮತ್ತು ರಾಡ್ ಇವುಗಳನ್ನು ಸಾಕ್ಷಿ ಗುರುತಿಸಿದ್ದು, ಅವು ಈಗಾಗಲೇ ಮು ಮಾ 1 ಮತ್ತು 2 ಎಂದು ಗುರುತಿಸಲಾಗಿದೆ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಸಿ.ಎಸ್. ವಕೀಲರಿಂದ:</u> ಆರೋಪಿ ಪರ ವಕೀಲರು ಕಲಂ 231 ಸಿ.ಆರ್.ಪಿ.ಸಿ. ಅಡಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

ಸಹಿ/-
**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

ಆರೋಪಿ ಪರ ವಕೀಲರು ಕಲಂ. 254 (4) B.N.S.S. ಅಡಿಯಲ್ಲಿ ಅರ್ಜಿ ಸಲ್ಲಿಸಿದ್ದು, ಚಾಸಾ. 2 ಮತ್ತು 11 ರವರ ಮುಖ್ಯ ವಿಚಾರಣೆಯ ನಂತರ ಪಾಟೀ ಸವಾಲು ಮಾಡುವುದಾಗಿ ಹೇಳಿದ್ದು, ಅನುಮತಿ ನೀಡಲಾಯಿತು.

ಆರೋಪಿಯನ್ನು ಪರಪ್ಪನ ಅಗ್ರಹಾರದಿಂದ ವಿಡಿಯೋ ಕಾನ್ಫರೇನ್ಸ ಮೂಲಕ ಹಾಜರು ಪಡಿಸಿದ್ದು ಸಾಕ್ಷಿ ಗುರುತಿಸಿರುತ್ತಾರೆ.

ನ್ಯಾಯಾಲಯದ ಮುಂದೆ ಸೀಲ್ಡ್ ಕವರಿಂದ ತೆಗೆದು ತೋರಿಸಿದ್ದು ಶರ್ಟ, ಪ್ಯಾಂಟ್ ಮತ್ತು ಬನಿಯನ್ ಅನ್ನು ಸಾಕ್ಷಿ ಗುರುತಿಸಿದ್ದು ಅವುಗಳನ್ನು ಮು. ಮಾ. 1 ರಿಂದ 3 ಎಂದು ಗುರುತಿಸಲಾಯಿತು.

ಈಗ ನನಗೆ ತೋರಿಸಿದ ಫೋಟೋ ಆ ಸ್ಥಳದಲ್ಲಿ ಮಹಜರ್ ಕಾಲಕ್ಕೆ ತೆಗೆದಿದ್ದು ಅದನ್ನು ನಿಶಾನೆ.ಪಿ. 3 ಎಂದು ಗುರುತಿಸಲಾಯಿತು.

ಆ ವಿಚಾರದಲ್ಲಿ ಪೊಲೀಸರು ಸ್ಥಳಕ್ಕೆ ಬಂದು ನೋಟೀಸ್ ಕೊಟ್ಟು ನನ್ನ ಸಮಕ್ಷಮ, ಎರಡು ಪ್ಲಾಸ್ಟಿಕ್ ಪೈಪ್ ಗಳು, ಒಂದು ದೊಣ್ಣೆ, ಕಲ್ಲು, ರಕ್ತ ಕಲೆಯಾದ ಶರ್ಟ ಅನ್ನು ವಶಕ್ಕೆ ಪಡೆದರು ಎಂದರೆ ಸರಿ ಅಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದೆರ ಸರಿ ಅಲ್ಲ.

ನಾನು ಅದರ ಸಂಬಂಧವಾಗಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿ ಅಲ್ಲ. ಸಾಕ್ಷಿ ಹೇಳಿಕೆಯ ಭಾಗವನ್ನು ಓದಿ ತೋರಿಸಿದಾಗ ಸಾಕ್ಷಿ ನಿರಾಕರಿಸಿದ್ದರಿಂದ ಸದರಿ ಹೇಳಿಕೆಯ ಭಾಗವನ್ನು ನಿಶಾನೆ.ಪಿ. 3 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ ಸಮಯ ಕೋರಿದ್ದು, ಯಾವುದೇ ಸೂಕ್ತವಾದ ಕಾರಣ ತೋರಿಸಿಲ್ಲ ಆದ್ದರಿಂದ ಕೋರಿಕೆಯನ್ನು ತಿರಸ್ಕರಿಸಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಆರೋಪಿ ನಂ. 1 ಅನ್ನು ಸೇಲಂ ಕಾರಗೃಹದಿಂದ ಮೊಬೈಲ್ ಸಂಖ್ಯೆ 8217359642 ವಿಡಿಯೋ ಕಾನ್ಫರೇನ್ಸ ಮೂಲಕ ಹಾಜರು ಪಡಿಸಿದ್ದು ಸಾಕ್ಷಿ ಗುರುತಿಸಲ್ಲಿ.

ಸಮಯ ಕೋರಿದ್ದು, ಯಾವುದೇ ಸೂಕ್ತವಾದ ಕಾರಣ ತೋರಿಸಿಲ್ಲ, ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಆರೋಪಿತರ ಪರ ವಕೀಲರು ಗೈರು ಹಾಜರು, ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಹೆಚ್.ಎಸ್. ವಕೀಲರಿಂದ : ಸಮಯ ಕೋರಿದ್ದು, ರೂಪಾಯಿ 500/- ಖರ್ಚಿನೊಂದಿಗೆ ಮುಂದೂಡಲಾಯಿತು.